# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 292**
**ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ**
**(ವಿಧಾನಸಭೆಯಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 29.01.2026**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಸೇಡಂ ತಾಲ್ಲೂಕುಗಳಿಗೆ ಅನುಕೂಲವಾಗುವ ರೂ.505 ಕೋಟಿ ಮೊತ್ತದ 'ಕಾಗಿಣಾ ಏತ ನೀರಾವರಿ ಯೋಜನೆ'ಯ ವಿಸ್ತೃತ ಯೋಜನಾ ವರದಿ (DPR) ಸಿದ್ಧವಾಗಿದೆಯೇ: | ಕಲಬುರಗಿ ಜಿಲ್ಲೆಯ ಕಾಗಿಣಾ ನದಿಗೆ ಅಡ್ಡಲಾಗಿ ನಿರ್ಮಾಣವಾಗಿರುವ 10 ಬ್ರಿಡ್ಜ್ ಕಂ ಬ್ಯಾರೇಜ್‌ಗಳನ್ನು ಉಪಯೋಗಿಸಿಕೊಂಡು ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಸೇಡಂ ತಾಲ್ಲೂಕುಗಳಿಗೆ ಅನುಕೂಲವಾಗಿಸಲು ಕಾಗಿಣಾ ನದಿಪಾತ್ರದಡಿ ಒಟ್ಟು 10 ಏತ ನೀರಾವರಿ ಯೋಜನೆಗಳನ್ನು ಒಳಗೊಂಡ (ಜೆಟ್ಟೂರು, ಹಲ್ಕೊಡಾ, ಲಾಹೊರಾ, ಯಡ್ಡಳ್ಳಿ, ತೆರ್ನಳ್ಳಿ, ತೇಲ್ಕೂರ, ಕಾಚುರ, ಮೀನಹಾಬಾಳ. ಬೀರನಳ್ಳಿ & ಮಳಖೇಡ) ಸಮಗ್ರ ಯೋಜನೆಯ ವಿವರವಾದ ಯೋಜನಾ ವರದಿಯನ್ನು ರೂ.639.30 ಕೋಟಿ ಮೊತ್ತಕ್ಕೆ ತಯಾರಿಸಲಾಗಿದ್ದು, ಈ ಪೈಕಿ ರೂ.143.80 ಕೋಟಿ ಅಂದಾಜು ಮೊತ್ತದ ಯಡ್ಡಳ್ಳಿ ಮತ್ತು ತೆರ್ನಳ್ಳಿ ಏತ ನೀರಾವರಿ ಯೋಜನೆಗೆ ದಿನಾಂಕ:25.04.2022 ರಂದು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಪ್ರಸ್ತುತ, ಯಡ್ಡಳ್ಳಿ ಮತ್ತು ತೇರ್ನಳ್ಳಿ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು ಒಂದೇ ಪ್ಯಾಕೇಜಿನಲ್ಲಿ ದಿನಾಂಕ:10.06.2024 ರಂದು ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳುಗಳ ಕಾಲಾವಧಿಯನ್ನು ನಿಗದಿಪಡಿಸಲಾಗಿದೆ. |
| (ಆ) | ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಕಾಮಗಾರಿ ಪ್ರಾರಂಭಿಸಲು ಸರ್ಕಾರ ವಿಧಿಸಿಕೊಂಡಿರುವ ಕಾಲಮಿತಿ ಏನು; | |
| (ಇ) | ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಬ್ಯಾರೇಜ್ ಗಳ ನಿರ್ವಹಣೆ ಇಲ್ಲದೆ ನೀರು ವ್ಯರ್ಥವಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಭೀಮಾ ನದಿಗೆ ಅಡ್ಡಲಾಗಿ ಅಫಜಲಪೂರ ತಾಲೂಕಿನ ಸೊನ್ನ ಗ್ರಾಮದಲ್ಲಿ 6.00 ಟಿ.ಎಂ.ಸಿ. ಸಾಮರ್ಥ್ಯದ ಬ್ಯಾರೇಜ್ ನಿರ್ಮಿಸಿ, ಬಳೂಂಡಗಿ ಮತ್ತು ಅಳ್ಳಗಿ ಏತ ನೀರಾವರಿ ಮೂಲಕ ಅಫ್‌ಜಲ್‌ಪುರ ತಾಲ್ಲೂಕಿನ ಸುಮಾರು 24,292 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.<br><br>ಕೃಷ್ಣಾ ಕೊಳ್ಳದ ಭೀಮಾ ನದಿಪಾತ್ರದಡಿ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯಡಿ ಕಲ್ಲೂರ, ಘತ್ತರಗಾ, ಜೋಳದಡಗಿ-ಗುಡೂರು, ಯಾದಗಿರಿ, ಸನ್ನತಿ ಮತ್ತು ಉಮರಾಣಿ ಬ್ರಿಡ್ಜ್ ಕಂ ಬ್ಯಾರೇಜಗಳನ್ನು ನಿರ್ಮಿಸಲಾಗಿರುತ್ತದೆ.<br><br>ಸದರಿ ಬ್ಯಾರೇಜ್‌ಗಳ ನೀರು ವ್ಯರ್ಥವಾಗದಂತೆ, ಪ್ರತಿ ವರ್ಷ ನಿರ್ವಹಣೆ ಮಾಡಲಾಗುತ್ತಿದೆ. |

**ಜಸಂಇ 21 ಎಂಎಲ್‌ಎ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**